**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.**

**ಸಿ. ಸಿ. ನಂ. 73/2018**

**ಪಿರ್ಯಾಧಿದಾರರುಃ** ಶ್ರೀ ಶೇಖರ ಬಿ., ಬಿನ್ ಬಾಬು, 40 ವರ್ಷ, ವ್ಯವಸಾಯ, ವಾಸ ಗುಡ್ಡೆತೋಟ ಗ್ರಾಮ ಮತ್ತು ಅಂಚೆ, ಕೊಪ್ಪ ತಾಲ್ಲೂಕು.

**-ವಿರುದ್ಧ -**

**ಆರೋಪಿಃ** ಶ್ರೀ ಶಬೀರ್ ಅಹಮದ್ ಬಿನ್ ಲೇಟ್ ಹುಸೇನ್, ಸುಮಾರು 48 ವರ್ಷ, ಪಿ ಡಬ್ಲ್ಯೂ ಡಿ ಕಂಟ್ರಾಕ್ಟರ್, ವಾಸ ಗುಣವಂತೆ ರಸ್ತೆ, ಕೆಳಗಿನಪೇಟೆ, ಕೊಪ್ಪ 577126.

- - -

**ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿ ಹೇಳಿಕೆ**

ಪ್ರಃ 1ಃ ಪಿರ್ಯಾದುದಾರರ ಸಾಕ್ಷ್ಯ ಪ್ರಮಾಣ ಪತ್ರವನ್ನು ಓದಿದ್ದೀರಾ?
ಉಃ ಹೌದು

ಪ್ರಃ2ಃ ಪಿರ್ಯಾದುದಾರರು ತಮ್ಮ ಸಾಕ್ಷ್ಯದಲ್ಲಿ ನೀವು ಮತ್ತು ಅವರು ಪರಿಚಯಸ್ಥರಾಗಿದ್ದು ದಿನಾಂಕ 01.08.2017 ರಂದು ಅವರ ಬಳಿ ತುರ್ತು ಹಣದ ಅವಶ್ಯಕತೆಗಾಗಿ ರೂ.3,00,000/- ಗಳನ್ನು ಪಡೆದುಕೊಂಡು, ಸದರಿ ಹಣವನ್ನು 2 ತಿಂಗಳ ಒಳಗಾಗಿ ವಾಪಾಸ್ಸು ಮಾಡುವುದಾಗಿ ತಿಳಿಸಿರುತ್ತೀರಿ ಎಂದು ನುಡಿದಿದ್ದಾರೆ, ಇದಕ್ಕೆ ನೀವು ಏನಾದರೂ ಹೇಳಲು ಇಚ್ಚಿಸುವಿರಾ?
ಉಃ ಸುಳ್ಳು

ಪ್ರಃ3: ಪಿರ್ಯಾದಿದಾರರು ಮುಂದುವರೆದು ನೀವು ಹಣ ಕೊಡದಿದ್ದಾಗ ಅನೇಕ ಬಾರಿ ನಿಮ್ಮನ್ನು ಕೇಳಿದ್ದು ನಂತರ ನೀವು ದಿನಾಂಕ 12.10.2017 ಕ್ಕೆ ನಗದಾಗುವಂತೆ ಚೆಕ್ ನಂ. 856749 ನ್ನು 3,00,000/- ರೂ,ಗಳಿಗೆ ನೀಡಿದ್ದು, ಅವರು ಸದರಿ ಚೆಕ್‌ನ್ನು ನಗದೀಕರಣಕ್ಕಾಗಿ ಕಾರ್ಪೋರೇಷನ್ ಬ್ಯಾಂಕ್, ಕೊಗ್ರೆ ಶಾಖೆಗೆ ಹಾಜರುಪಡಿಸಿದ್ದು ಆದರೆ ನಿಮ್ಮ ಖಾತೆಯಲ್ಲಿ "Insufficient Funds'' ಎಂಬ ಹಿಂಬರಹದೊಂದಿಗೆ ದಿನಾಂಕ 17.10.2017 ರಂದು ವಾಪಸ್ಸಾಯಿತು ಎಂದು ನುಡಿದಿದ್ದಾರೆ, ಇದಕ್ಕೆ ನೀವು ಏನಾದರೂ ಹೇಳಲು ಇಚ್ಚಿಸುವಿರಾ?
ಉಃ ಸುಳ್ಳು

ಪ್ರ:4: ಪಿರ್ಯಾದಿದಾರರು ಮುಂದುವರೆದು ಅವರು ಸದರಿ ಚೆಕ್ ನಗದಾಗದೇ ವಾಪಸ್ಸು ಬಂದಿರುವ ವಿಚಾರವನ್ನು ನಿಮಗೆ ತಿಳಿಸಿದಾಗ ನೀವು ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಅವರು ದಿನಾಂಕ 02.11.2017 ರಂದು ವಕೀಲರ ಮೂಲಕ ನೋಟೀಸ್ ತಲುಪಿದ 15 ದಿನದೊಳಗೆ ಚೆಕ್ ನ ಹಣವನ್ನು ಮರುಪಾವತಿ ಮಾಡುವಂತೆ ಕೋರಿ ನೋಂದಾಯಿತ ಅಂಚೆ ಮುಖಾಂತರ ನೋಟೀಸ್ ನೀಡಿದ್ದು, ದಿನಾಂಕ 06.11.2017 ರಂದು ನಿಮಗೆ ನೋಟೀಸ್ ಜಾರಿಯಾಗಿದ್ದು, ನೀವು ಚೆಕ್ ನ ಹಣವನ್ನು ಇದುವರೆಗೂ ಕೊಟ್ಟಿಲ್ಲವೆಂದು ನಿಮಗೆ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ವಿಚಾರ ಗೊತ್ತಿದ್ದರೂ ಮತ್ತು ಚೆಕ್ ಕೊಟ್ಟ ನಂತರ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಡದೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಚೆಕ್ ನ್ನು ಕೊಟ್ಟು ಚೆಕ್ ವಾಪಾಸ್ಸಾಗಲು ಕಾರಣರಾಗಿರುತ್ತೀರಿ ಎಂದು ನುಡಿದಿದ್ದಾರೆ, ಇದಕ್ಕೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

ಉ: ಸುಳ್ಳು

ಪ್ರ.5: ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

ಉತ್ತರ: ಪಿರ್ಯಾದಿದಾರರು ಯಾರು ಎಂದು ನನಗೆ ಗೊತ್ತಿಲ್ಲ, PWD, AE ಜಯರಾಮರವರಿಂದ ನಾನು ಆಗಾಗ ಹಣ ಪಡೆದುಕೊಂಡಿದ್ದು, ನನ್ನ ಭದ್ರತೆಗಾಗಿ ನೀಡಿರುತ್ತೇನೆ, ಎಲ್ಲಾ ಹಣ ವಾಪಸ್ಸು ಕೊಟ್ಟಿರುತ್ತೇನೆ, ಆದರೆ ಜಯರಾಮ ನನ್ನ ಚೆಕ್ಕನ್ನು ವಾಪಸ್ಸು ನೀಡಿರುವುದಿಲ್ಲ, ಜಯರಾಮ ನನ್ನ ಚೆಕ್ಕನ್ನು ಪಿರ್ಯಾದಿದಾರರಿಗೆ ನೀಡಿರುತ್ತಾರೆ ಹಾಗೂ ಪಿರ್ಯಾದಿದಾರರು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.

ಪ್ರ.6ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ: ಇದೆ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 19.10.2024

ಸಹಿ/- 19.10.2024
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,
ಕೊಪ್ಪ

ಆರೋಪಿ ಸಹಿ: